Reg. No. | | | | | | | | | |

**BCMKAL 204**

# III Semester B.Com. Degree Examination, October/November 2019

*(Credit Based Semester Scheme)*

*(2018-19 Batch onwards)*

## Kannada Language

## ಕನ್ನಡ ಭಾಷೆ – III

Shri Dharmasthala Manjunatheshwara College of Business Management Library
MANGALORE - 575 003

Time : 3 Hours] [Max. Marks : 80

I. ಒಂದು ವಿಭಾಗದಿಂದ ಒಂದು ಪ್ರಶ್ನೆಯಂತೆ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ : **(3 × 8 = 24)**

1. 'ತನ್ನ ಅಳಿಯನಿಗೇ ತನ್ನ ಸಂಪತ್ತು ಸೇರಲಿ' ಎಂದು ದೇವ ಪಾಂಡ್ಯನು ಘೋಷಿಸಲು ಕಾರಣವೇನು? ವಿವರಿಸಿರಿ.

ಅಥವಾ

'ಭೀಮಾರ್ಜುನರನ್ನು ಕೊಂದ ಬಳಿಕವೇ ಸಂಧಿಯ ಮಾತು'' – ದುರ್ಯೋಧನನ ನಿರ್ಧಾರದ ಸಂದರ್ಭ, ಹಿನ್ನೆಲೆ, ಉದ್ದೇಶಗಳನ್ನು ವಿವರಿಸಿರಿ.

2. ಬದುಕಿನಲ್ಲಿ ಔಚಿತ್ಯ ಪ್ರಜ್ಞೆಯ ಅವಶ್ಯಕತೆಯನ್ನು 'ಬದುಕಿನ ಇಬ್ಬದಿಗಳು' ಪ್ರಬಂಧದಲ್ಲಿ ಲೇಖಕರು ನಿರೂಪಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಅತಿಯಾದ ಆಧುನಿಕತೆ ತಂದ ಆಪತ್ತುಗಳನ್ನು ''ಪರಿಸರ ಮಾಲಿನ್ಯ ಮತ್ತು ಲಿಂಗ ಪರಿವರ್ತನೆ'' ಲೇಖನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

3. ಡಾ. ಶ್ರೀನಾಥ್ ಅವರ ವ್ಯಕ್ತಿತ್ವ ಹಾಗೂ ಅವರ ಚಿಕಿತ್ಸಾ ವಿಧಾನದ ಪರಿಯನ್ನು ವಿವರಿಸಿರಿ.

ಅಥವಾ

ಮನುಷ್ಯರಲ್ಲಿ ಬೆಳೆದು ಬಂದ ಕ್ರೌರ್ಯ ನಿರೂಪಕಿಗೆ ಅನುಭವಕ್ಕೆ ಬಂದ ಪ್ರಸಂಗವನ್ನು ವಿವರಿಸಿರಿ.

II. ಒಂದು ವಿಭಾಗದಿಂದ ಒಂದರಂತೆ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3 × 5 = 15)**

1. ಮಂಟೇಸ್ವಾಮಿಯ ಬಸವಣ್ಣನವರ ಭಕ್ತಿಯ ದೃಢತೆಯನ್ನು ಪರೀಕ್ಷಿಸಿದ ಸಂದರ್ಭವನ್ನು ವಿವರಿಸಿರಿ.

ಅಥವಾ

ರೂಪಾ ಹಾಸನರ 'ತನ್ನಷ್ಟಕ್ಕೆ' ಕವನದ ಆಶಯವನ್ನು ವಿವರಿಸಿರಿ.

2. 'ಮುಗಿಯದ ಕಥೆಯ ಆಶಯವು ಸರ್ವರ ಕುಟುಂಬದ ಮುಗಿಯದ ಕಥೆಯಾಗಿ ಅನ್ವಯವಾಗುವ ಬಗೆ' ಎಂಬ ಮಾತನ್ನು ವಿಶ್ಲೇಷಿಸಿರಿ.

ಅಥವಾ

'ಜಾಗತೀಕರಣ ಮತ್ತು ಜಾನಪದ' ಲೇಖನದ ಆಶಯವೇನು?

3. ಭಾರತಿಯವರಿಗೆ ಕ್ಯಾನ್ಸರ್ ಎಂದು ಗೊತ್ತಾದಾಗ ಕುಟುಂಬ ಸದಸ್ಯರ ಪ್ರತಿಕ್ರಿಯೆ ಹೇಗಿತ್ತು? ವಿವರಿಸಿರಿ.

ಅಥವಾ

'ಕಿಮೋಥೆರಪಿ' ಎಂದರೇನು? ಅದರಿಂದ ನಿರೂಪಕಿಯ ಮೇಲಾದ ಪ್ರಭಾವವೇನು?

III. **ಒಂದು** ಪದ್ಯದ ಸಂದರ್ಭ ಹಾಗೂ ಭಾವಾರ್ಥದೊಂದಿಗೆ ಸ್ವಾರಸ್ಯವನ್ನು ವಿವರಿಸಿರಿ : **(1 × 5 = 5)**

1. ವೀರ ಶತಜನನಿಗೀ ಗಾಂ
ಧಾರಿಗೆ ಶತದುಃಖ ಜನನಿವೆಸರಾಯ್ತೀಗಳ್
ಕೆರವಪತಿ ದುಃಖ ಮಹಾ
ಭಾರವನಾಂತಾಯಸಕ್ಕೆ ಗುಱಿಯಾದುದಱಿಂ.

2. ಇವರು ಮಡ್ಡೀ ಮಾಂಸ ತಿನ್ನುವರೂ
ಈವಾಗಲೀಗ ಇವತ್ತೀನ ದಿವಸದಲ್ಲಿ
ಬಸವಣ್ಣೋರು ಬತ್ತಗಿಟ್ಟವರು ಅಂತೇಳಿ
ಈ ಬತ್ತಗೆಟ್ಟೋರ ಮನೇಲಿ
ಅನ್ನ ಉಂಡು ಬಿಟ್ಟ ನಾವು ಸುದ್ದಾಗಿಲ್ಲ.

IV. (ಅ) **ಎರಡು** ವಾಕ್ಯಗಳಿಗೆ ಸಂದರ್ಭ ತಿಳಿಸಿ, ಸ್ವಾರಸ್ಯ ಬರೆಯಿರಿ : **(2 × 4 = 8)**

1. ಉಳ್ಳಾಲದ ರಾಣಿ ಅಬ್ಬಕ್ಕ! ಮಣ್ಣಿನ ಮಗಳು ಅಬ್ಬಕ್ಕಾ!
2. ನಾಲ್ಕೇ ದಿನದ ಅತಿಥಿ ನೀನಿಲ್ಲಿ
3. ಏನು ಮಾಡುವುದು ನಮ್ಮ ಕಣ್ಣಿಗದು ಕಾಣುವುದೇ ಇಲ್ಲ
4. ಎಂದು ಬರುವುದೊ ಗುಳೆಯೆದ್ದು ಹೋದ ಬರದೂರು.

(ಆ) **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. ಪ್ರೊ. ಎ.ವಿ. ನಾವಡ
2. ಅನ್ಯಾಯವಾದರೂ ನಾಗರಿಕ ಸಮಾಜದ ತಾಟಸ್ಥ್ಯಕ್ಕೆ ಡಾ. ಕಾಮತರು ಕಂಡುಕೊಂಡ ಕಾರಣಗಳು
3. 'ಅಂಗುಲ' ಶಬ್ದದ ಹಿನ್ನೆಲೆ, ಪದ ನಿಷ್ಪತ್ತಿ ಮತ್ತು ಅರ್ಥ
4. 'ಸೋಡಾ ಚೀಟಿ' ಪದವನ್ನು ವಿಶ್ಲೇಷಿಸಿರಿ.

(ಇ) **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. ನವೆಂಬರ್ 26, 2011 ಶನಿವಾರ
2. ಮೊದಲ ಬಾರಿಗೆ ಆಸ್ಪತ್ರೆಗಳಲ್ಲಾದ ಅನುಭವ
3. ಭಾರತಿಯವರು ನೇಮಿಸಿಕೊಂಡ ಅಡುಗೆಯವಳು
4. ನಿರೂಪಕಿಯ ವಿಗ್

Shri Dharmasthala Manjunatheshwara
College of Business Management Library
MANGALORE - 575 003

V. ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿರಿ : **(12 × 1 = 12)**

1. 'ಒಂದು ಪ್ರಾತಃಕಾಲ ಕವಿತೆಯನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ?
2. ರಾಣಿ ಅಬ್ಬಕ್ಕ ಯಾರ ದ್ರೋಹ ಸಂಚಿಗೆ ಗುರಿಯಾದಳು?
3. ಕಟುಗರ ಸಂಗಯ್ಯ ಕುಷ್ಠ ರೋಗಿಯ ಹೆಕ್ಕತ್ತಿನ ಮೇಲೆ ಗುದ್ದಿದ ಏಟು ಯಾರಿಗೆ ತಾಗಿತು?
4. ಧೃತರಾಷ್ಟ್ರ-ಗಾಂಧಾರಿಯರ ಜೊತೆಗಿದ್ದು ಸಮಾಧಾನಿಸುತ್ತಿದ್ದವನು ಯಾರು?
5. 'ಮಳೆ ಹಕ್ಕಿ' ಕವನದ ಮೂಲ ಭಾಷೆ ಯಾವುದು?
6. 'ಕಾದಂಬರಿಯ ಸಾರ್ವಭೌಮ' ಎಂದು ಖ್ಯಾತರಾದವರು ಯಾರು?
7. 'ಕುರಿಗಳು ಸಾರ್ ಕುರಿಗಳು' – ರಾಜಕೀಯ ವಿಡಂಬನೆಯ ಪ್ರಸಿದ್ಧ ಕವನವನ್ನು ರಚಿಸಿದವರು ಯಾರು?
8. ನ್ಯೂಯಾರ್ಕ್‌ನ ವಿದ್ಯಾರ್ಥಿ ರಿಕ್ ಕೋರ್ಮಿಯರ್ ಯಾರ ಡಾಕ್ಯುಮೆಂಟರಿ ರಚಿಸಲು ಸಹಾಯ ಕೋರಿದ್ದನು?
9. ಫಿಂಚ್ ಹಕ್ಕಿಗೆ ಜೇಬ್ರಾ ಫಿಂಚ್ ಹೆಸರು, ಬರಲು ಕಾರಣವೇನು?
10. ಅರಬ್ಬೀ ಭಾಷೆಯ 'ಸಹೀಹ್' ಕನ್ನಡದಲ್ಲಿ ಯಾವ ರೂಪದಲ್ಲಿ ಬಳಕೆಯಾಗುತ್ತಿದೆ?
11. 'ಸಾಸಿವೆ ತಂದವಳು' – ಇದು ಯಾರ ಆತ್ಮಕಥೆ?
12. ನಿರೂಪಕಿಗೆ 'ಕಿಮೋಥೆರಪಿ' ನಡೆಸಿದ ಡಾಕ್ಟರ್ ಯಾರು?

---